**ಮೂ.ದಾ.ನಂ. 68/2014**

ಪಿ.ಡಬ್ಲ್ಯು 1

(ಇಂದು ದಿನಾಂಕ: **10-11-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ. ವಾಯ್.ವಿ.ಎಸ್. ವಕೀಲರಿಂದಃ**

ಕುಮಟಾ ತಾಲೂಕಿನ ಹಳೇ ಹೆರವಟ್ಟಾ ಗ್ರಾಮದ ಸರ್ವೆ ನಂಬರ 43 ಹಿಸ್ಸಾ 3 ಬ ದಲ್ಲಿ ಮುಕುಂದಾ ಬಾಬು ಪೈ ಎಂಬುವರಿಗೆ 1/7 ಹಕ್ಕನ್ನು ಹಾಗೂ ಅನಂತ ಗಣಪಯ್ಯಾ ಶಾನಭಾಗ ಇವರಿಗೆ 6/7 ಅಂಶ ಹಕ್ಕು ಇರುವ ಜಾಗದಲ್ಲಿ ಜೋಪಡಿ ಇತ್ತು ಎಂದರೆ ಸರಿ. ಸದ್ರಿ ಜೋಪಡಿಯನ್ನು 1984 ನೇ ಸಾಲಿನಲ್ಲಿ 2ನೇ ಪ್ರತಿವಾದಿಯು ನವೀಕರಣ ಮಾಡಿರತ್ತಾರೆ ಎಂದರೆ ಸರಿಯಲ್ಲ. ಸದ್ರಿ ಜೋಪಡಿಯಲ್ಲಿ ಓರಿ, ಬಚ್ಚಲು ಮನೆ ಹಾಗೂ ಸಂಡಾಸನ್ನು ಹೊಸದಾಗಿ ಕಟ್ಟಿಸಲಾಗಿದೆ ಹಾಗೂ ಹುಲ್ಲಿನ ಛಾವವಣೆಯನ್ನು ತೆಗೆದು ಹಂಚಿನ ಛಾವವಣೆಯನ್ನು 2ನೇ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು 1ನೇ ವಾದಿ ಹಾಗೂ 1ನೇ ಪ್ರತಿವಾದಿಯು ಸೇರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

1984 ನೇ ಸಾಲಿನಲ್ಲಿ ಸದ್ರಿ ಮನೆಯನ್ನು ನವೀಕರಣ ಮಾಡುವಂತಹ ಸಮಯದಲ್ಲಿ 2, 3 ಹಾಗೂ ಅವರ ತಾಯಿಯಾದ ರುಕ್ಮೀಣಿ ಶಾನಭಾಗ ಇವರು ವಾಸ್ತವ್ಯದಲ್ಲಿ ಇದ್ದರು ಎಂದರೆ ಸರಿ. ಸದ್ರಿ ನವೀಕರಣವನ್ನು ನನ್ನ ತಾಯಿ ಅಂದರೆ 1ನೇ ವಾದಿ ಹಾಗೂ 1ನೇ ಪ್ರತಿವಾದಿಯು ಮಾಡಿಸಿದ ಕುರಿತಾಗಿ ಯಾವುದೇ ದಾಖಲಾತಿ ಇರುವುದಿಲ್ಲ. ಸದ್ರಿ ನವೀಕರಣವನ್ನು 2ನೇ ಪ್ರತಿವಾದಿಯು ಅವನ ಸ್ವಂತ ಗಳಿಕೆ ಹಾಗು ಆದಾಯದಿಂದ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದ್ರಿ ನವೀಕರಣವನ್ನು 1ನೇ ವಾದಿ ಹಾಗೂ 2ನೇ ಪ್ರತಿವಾದಿಯು ಮಾಡಿಲ್ಲ ಎಂದರೆ ಸರಿಯಲ್ಲ.

**ಮೂ.ದಾ.ನಂ. 68/2014**

ಪಿ.ಡಬ್ಲ್ಯು 1

ಈಗ ಇರುವ ಮನೆಯು ಬಚ್ಚಲು ಮನೆ ಹಾಗೂ ಸಂಡಾಸವನ್ನು ಪೂರ್ತಿಯಾಗಿ ಆ ಸ್ಥಳವನ್ನು ಅಕ್ರಮಿಸಿಕೊಂಡಿದೆ ಎಂದರೆ ಸಾಕ್ಷಿಯು ಸ್ವಲ್ಪ ಅಂಗಳ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ 43 ಹಿಸ್ಸಾ 5 ಹಾಗೂ ಸರ್ವೆ ನಂಬರ 43 ಹಿಸ್ಸಾ 3ಬ ನೇದ್ದವುಗಳು ಹಾಗೂ ಮನೆಯ ಪೂರ್ವಕ್ಕೆ ಯಾವುದೇ ಜಾಗಗಳು ಖಾಲಿ ಇಲ್ಲ ಎಂದರೆ ಸರಿ. ಮನೆಯ ಮುಂಭಾಗದಲ್ಲಿ ಇರುವ ಅಂಗಳದಲ್ಲಿ ತುಳಸಿ ಕಟ್ಟೆ ಇದೆ ಎಂದರೆ ಸರಿ. ಮನೆಯ ಪಶ್ಚಿಮ ಗಡಿ ಹಾಗೂ ಪಶ್ಚಿಮದ ಸರ್ವೆ ಗಡಿಯ ಮಧ್ಯದಲ್ಲಿ ಯಾವುದೇ ಜಾಗ ಇಲ್ಲ ಎಂದರೆ ಸರಿ. ಮನೆಯ ಅಂಗಳದಲ್ಲಿ ಸಂಡಾಸು, ಬಚ್ಚಲು ಮನೆ ಹಾಗೂ ಕಟ್ಟಿಗೆ ವಗೈರೆಗಳನ್ನು ದಾಸ್ತಾನು ಮಾಡುವ ಸ್ಟೋರ್ ರೂಮಗಳನ್ನು ಒಳಗೊಂಡ ಪ್ರತ್ಯೇಕ ಇಮಾರತು ಇದೆ ಎಂದರೆ ಸರಿ. ಈ ಇಮಾರತು ಹಾಗೂ ವಗೈರೆಗಳನ್ನು ಒಳಗೊಂಡ ಜಾಗದಲ್ಲಿ ವಾಂಟಣಿ ಕಾಲದಲ್ಲಿ ಪ್ರಥಮವಾಗಿ ಮುಕುಂದ ಬಾಬು ಪೈ ಇವರ 1/7 ನ್ನು ವಿಂಗಡಿಸಿಕೊಡಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸರ್ವೆ ನಂಬರ 43 ಹಿಸ್ಸಾ 3ಬ ದಲ್ಲಿ ಮುಕುಂದು ಬಾಬು ಪೈ ಇವರು ಅವರ 1/7 ಭಾಗವನ್ನು ಈಗಾಗಲೇ ಪಡೆದುಕೊಂಡು ಗಿಡಗಳನ್ನು ಬೆಳೆಸಿಕೊಂಡು ತಂತಿ ಬೇಲಿಯನ್ನು ಸರ್ವೆ ಮುಖಾಂತರ ಹಾಕಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ಜಾಗದಲ್ಲಿ ಎಷ್ಟು ಕ್ಷೇತ್ರದ ದಾಖಲಾತಿ ಪೋಡಿ ಆಗಿದೆ ಎಂಬ ಬಗ್ಗೆ ನನಗೆ ತಿಳಿದಿಲ್ಲ.

ದಾವೆಯನ್ನು ದಾಖಲು ಮಾಡುವ ಸಂದರ್ಭದಲ್ಲಿ ಹಾಗೂ ಇಂದಿನವರೆಗೆ ಸರ್ವೆ ನಂಬರ 43 ಹಿಸ್ಸಾ 3ಬ ದ ಕಂದಾಯ ಹಾಗೂ ಸರ್ವೆ ದಾಖಲಾತಿಗಳಲ್ಲಿ ಒಂದೇ ಸರ್ವೆ ನಂಬರದಲ್ಲಿ ಇದ್ದು, ಮುಕುಂದ ಬಾಬು ಪೈ ಇವರ 1/7 ಹಕ್ಕು ಹಾಗೂ ಅನಂತ ಗಣಪಯ್ಯಾ ಶಾನಭಾಗ ಇವರಿಗೆ 6/7 ಹಕ್ಕು ಇರುವ ಬಗ್ಗೆ ನಮೂದು ಇದ್ದು ಪ್ರತ್ಯೇಕವಾಗಿರದೇ ಇರುವುದು ಕಂಡು ಬರುತ್ತದೆ ಎಂದರೆ ಸರಿ. ನಾನು

ಉದ್ದೇಶಪೂರ್ವಕವಾಗಿ ಅವರ 1/7 ಹಕ್ಕು ಬೇರೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಮನೆಯಲ್ಲಿ 2ನೇ ಪ್ರತಿವಾದಿಯು ತನ್ನ ಹೆಂಡತಿ ಮಕ್ಕಳೊಂದಿಗೆ ವಾಸ್ತವ್ಯದಲ್ಲಿ ಇದ್ದಾನೆ ಎಂದರೆ ಸಾಕ್ಷಿಯು ಆತನು ಜಬರದಸ್ತಿನಿಂದ ಸದ್ರಿ ಮನೆಯಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಜಬರದಸ್ತ ಎಂದರೆ ಆತನು ನಮ್ಮನ್ನು ಮನೆಯ ಒಳಗಡೆ ಬರಲು ಬಿಡುವುದಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಮನೆಯಲ್ಲಿ 2ನೇ ಪ್ರತಿವಾದಿಯೇ ಹಿಂದಿನಿಂದಲೂ ನಡೆದು ಬಂದಂತಹ ದೇವತಾ ಕಾರ್ಯವನ್ನು ಹಾಗೂ ಪಿತ್ರು ಕಾರ್ಯವನ್ನು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಕಾರ್ಯವನ್ನು ಗಣಪಯ್ಯಾ ಅನಂತ ಶಾನಭಾಗ ಇವರು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಎಲ್ಲಾ ದೇವತಾ ಕಾರ್ಯಗಳನ್ನು ಹಾಗೂ ಪಿತ್ರು ಕಾರ್ಯವನ್ನು 2ನೇ ಪ್ರತಿವಾದಿಯು ಮಾಡುತ್ತಿದ್ದನು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ಮನೆ ಹಾಗೂ ಇತರ ಉಪಗೃಹಗಳಲ್ಲಿ ಒಂದು ಸಂಸಾರ ಮಾತ್ರ ಒಟ್ಟಾಗಿ ಇರಬಹುದು ಎಂದರೆ ಸರಿಯಲ್ಲ. ಆದ್ದರಿಂದ ಸದ್ರಿ ಮನೆ ವಾಂಟಣೆಗೆ ಪಾತ್ರವಲ್ಲ ಎಂದರೆ ಸರಿಯಲ್ಲ. ಸದ್ರಿ ಮನೆಯ ಉದ್ದ 60 ಅಡಿ ಹಾಗೂ 80 ಅಡಿ ಅಗಲ ಇರುತ್ತದೆ. ಮನೆಯ ಉದ್ದ ಅಗಲ 28 x 27 ಇದೆ ಎಂದರೆ ಸರಿಯಲ್ಲ.

ಸರ್ವೆ ನಂಬರ 43 ಹಿಸ್ಸಾ 3ಬ ಸ್ಥಳ ಹಾಗೂ ಮನೆ ವಾಂಟಣೆಗೆ ಪಾತ್ರವಲ್ಲ ಎಂಬ ವಿಷಯವನ್ನು ಮನಗಂಡು 1 ಹಾಗೂ 3ನೇ ಪ್ರತಿವಾದಿಯು ದಿಃ 22/12/2011 ರಂದು ತಮ್ಮ ಅಂಶವಾರಿ ಹಕ್ಕನ್ನು 2ನೇ ಪ್ರತಿವಾದಿಗೆ ನೋಂದಣಿ ಹಕ್ಕು ಬಿಡುಗಡೆಯ ಪ್ರಕಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದ್ರಿ ದಾಖಲಾತಿಯು ರದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು 2011 ರಲ್ಲಿ ಸದ್ರಿ ದಾಖಲಾತಿಯು ನೋಂದಾಯಿತ ಆಗಿರುವುದಿಲ್ಲ ಎಂದು ಪಹಣಿ

**ಮೂ.ದಾ.ನಂ. 68/2014**

ಪಿ.ಡಬ್ಲ್ಯು 1

ಪತ್ರಿಕೆಯಲ್ಲಿ ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ಪಹಣಿ ಪತ್ರಿಕೆಯು ನನ್ನ ಬಳಿ ಇದೆ. ಸದ್ರಿ ದಾಖಲಾತಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ಸದ್ರಿ ದಸ್ತಾವೇಜು ರದ್ದುಗೊಂಡಿರದೇ ಇಂದಿಗೂ ಊರ್ಜಿತದಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಈ ಸಮಯದಲ್ಲಿ ಸದ್ರಿ ಹಕ್ಕು ಬಿಡುಗಡೆ ಪತ್ರವು ರದ್ದಾಗಿರುವುದು ಮ್ಯುಟೇಷನ ಎಂಟ್ರಿಯಲ್ಲಿ ಕಂಡು ಬರುತ್ತದೆ ಎಂದು ನುಡಿಯುತ್ತಾರೆ.

ಸರ್ವೆ ನಂಬರ 43 ಹಿಸ್ಸಾ 3ಬ 1 ಹಾಗೂ 3ನೇ ಪ್ರತಿವಾದಿಯರು ತಮ್ಮ ಹಕ್ಕನ್ನು ಬಿಡುಗಡೆ ಮಾಡಿಕೊಟ್ಟಿರುವುದರಿಂದ ಅವವರಿಗೆ ಸದ್ರಿ ಸರ್ವೆ ನಂಬರದಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿಯು ಸದ್ರಿಯವರು ಮೃತರಾಗಿದ್ದು, ಅವರ ಹೆಂಡತಿ ಮಕ್ಕಳು ಬರೆದುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸದ್ರಿ ದಸ್ತಾವೇಜು 1 ಹಾಗೂ 3ನೇ ಪ್ರತಿವಾದಿಯು ಬರೆದುಕೊಟ್ಟಿದ್ದು, ಅದು ಅವರ ವಾರಿಸುದಾರರಿಗೆ ಸಹ ಬಂಧನಕಾರಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಮ್ಯುಟೇಷನ ಎಂಟ್ರಿ ರದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ಬರೆದಿರುವ ದಾವೆಯನ್ನು ದಾಖಲಿಸಲು ವಾದ ಪತ್ರದ 5 ಹಾಗೂ 6ನೇ ಪ್ಯಾರಾದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ನನ್ನ ತಾಯಿ ಜೀವಂತ ಕಾಲದಲ್ಲಿ ಹಾಗೂ ಪ್ರಸ್ತುತ ನನಗಾಗಲೀ ವಾಂಟಣಿಯ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ತೊಂದರೆ ನೀಡಲು ಅನಾವಶ್ಯಕವಾಗಿ ಈ ದಾವೆಯನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ಮೂ.ದಾ.ನಂ. 68/2014**

ಪಿ.ಡಬ್ಲ್ಯು.1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ